# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 855

ಸದಸ್ಯರ ಹೆಸರು : ಶ್ರೀ ಸುನೀಲ್ ವಲ್ಯಾಪುರ್
(ವಿಧಾನಸಭಾ ಕ್ಷೇತ್ರದಿಂದ ಚುನಾಯಿತರಾದವರು)

ಉತ್ತರಿಸಬೇಕಾದ ಸಚಿವರು : ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು

ಉತ್ತರಿಸಬೇಕಾದ ದಿನಾಂಕ : 11-03-2026

| ಪ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| (ಅ) | ರಾಜ್ಯದಲ್ಲಿ ಪ್ರಾದೇಶಿಕ ಸಾರಿಗೆ ಕಛೇರಿ (ಆರ್.ಟಿ.ಓ)ಯಿಂದ ವಾಹನಗಳಿಗೆ ಪರವಾನಗಿ ಪಡೆದು, ಒಂದೇ ಅನುಮತಿ (Permit) ಪತ್ರದ ಆಧಾರದ ಮೇಲೆ ಹಲವಾರು ವಾಹನಗಳನ್ನು ಓಡಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಸರ್ಕಾರದ ಗಮನಕ್ಕೆ ಬಂದಿರುತ್ತದೆ. |
| (ಆ) | ಈ ರೀತಿಯ ನಿಯಮ ಉಲ್ಲಂಘನೆಯಾದ ಪ್ರಕರಣಗಳೆಷ್ಟು; (ಕಳೆದ 3 ವರ್ಷಗಳ ಮಾಹಿತಿ ಒದಗಿಸುವುದು); | ಈ ರೀತಿಯ ನಿಯಮ ಉಲ್ಲಂಘನೆಯಡಿ ಕಳೆದ ಮೂರು ವರ್ಷಗಳಲ್ಲಿ ದಾಖಲಿಸಿರುವ ಪ್ರಕರಣಗಳು, ಬಾಕಿಯಿರುವ ಪ್ರಕರಣಗಳು ಹಾಗೂ ಕೈಗೊಂಡಿರುವ ಕ್ರಮಗಳ ವಿವರಗಳನ್ನು **ಅನುಬಂಧದಲ್ಲಿ** ಒದಗಿಸಿದೆ<br><br>ಬಾಕಿಯಿರುವ ಪ್ರಕರಣಗಳನ್ನು ಶೀಘ್ರವಾಗಿ ವಿಲೇವಾರಿ ಮಾಡಲಾಗುವುದು. |
| (ಇ) | ಕಾನೂನು ಉಲ್ಲಂಘನೆಯ ಪ್ರಕರಣಗಳಲ್ಲಿ ಇತ್ಯರ್ಥವಾದ ಪ್ರಕರಣಗಳೆಷ್ಟು; ಬಾಕಿ ಉಳಿದಿರುವ ಪ್ರಕರಣಗಳೆಷ್ಟು; (ಜಿಲ್ಲಾವಾರು ವಿವರ ನೀಡುವುದು); ಈ ತರಹದ ಕಾನೂನು ಉಲ್ಲಂಘನೆಯ ಪ್ರಕರಣಗಳ ಮೇಲೆ ಸರ್ಕಾರ ಯಾವ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ; | |
| (ಈ) | ರಾಜ್ಯದಲ್ಲಿ ಐಷಾರಾಮಿ ಕಾರು ಮತ್ತು ಬಸ್ಸುಗಳಲ್ಲಿ ತೆರಿಗೆ ಉಳಿಸುವ ನಿಟ್ಟಿನಲ್ಲಿ ಬೇರೆ ರಾಜ್ಯದಲ್ಲಿ ನೋಂದಣಿ ಮಾಡಿ ನಮ್ಮ ರಾಜ್ಯದಲ್ಲಿ ಚಲಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಯಾವ ಕ್ರಮ ಕೈಗೊಳ್ಳಲಾಗಿದೆ; | ಹೊರ ರಾಜ್ಯಗಳಲ್ಲಿ ನೋಂದಣಿಯಾಗಿ ರಾಜ್ಯದಲ್ಲಿ ಅನಧಿಕೃತವಾಗಿ ಸಂಚರಿಸುತ್ತಿರುವ ವಾಹನಗಳನ್ನು ತಪಾಸಣೆಗೆ ಒಳಪಡಿಸಿ ಪ್ರಕರಣ ದಾಖಲಿಸಿ ತೆರಿಗೆ ಮತ್ತು ದಂಡಗಳನ್ನು ಸಂಗ್ರಹಿಸಲಾಗಿರುತ್ತದೆ, ವಿವರಗಳು ಈ ಕೆಳಕಂಡಂತಿವೆ. |

| ವಿಭಾಗ | ದಾಖಲಿಸಿದ ಪ್ರಕರಣಗಳು | ಸಂಗ್ರಹಿಸಿದ ತೆರಿಗೆ ಮತ್ತು ದಂಡ ರೂ. ಗಳಲ್ಲಿ |
|---|---|---|
| ಬೆಂಗಳೂರು (ನಗರ) | 3207 | 42,10,72,129 |
| ಬೆಂಗಳೂರು (ಗ್ರಾಮಾಂತರ) | 39 | 27,935 |
| ಮೈಸೂರು | 02 | 1,78,76,071 |
| ಶಿವಮೊಗ್ಗ | 68 | 32,40,595 |
| ಬೆಳಗಾವಿ | 125 | 1,99,62,884 |
| ಕಲಬುರಗಿ | 257 | 3,37,51,647 |
| **ಒಟ್ಟು** | **3698** | **49,59,31,261** |

| ಪ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಉ) | ಸಾರಿಗೆ ಇಲಾಖೆಯ ನಿಯಮದ ಅನುಸಾರ ನೂತನ ವಾಹನ ಪಡೆದ ಎಷ್ಟು ದಿನದೊಳಗೆ ನೋಂದಣಿ ಮಾಡಿಸಬೇಕು: ನೋಂದಣಿಯೇ ಆಗದೆ ತಾತ್ಕಾಲಿಕ ನೋಂದಣಿ ಮಾಡಿಸಿ ಅಥವಾ ನಕಲಿ ದಾಖಲೆ (ಆರ್ ಸಿ) ಮಾಡಿಸಿ ಚಲಾಯಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: ಬಂದಿದ್ದಲ್ಲಿ, ಇಂತಹ ಪ್ರಕರಣಗಳಿಗೆ ಸರ್ಕಾರ ಯಾವ ಕ್ರಮ ಕೈಗೊಂಡಿದೆ: ಎಷ್ಟು ಪ್ರಕರಣ ದಾಖಲಾಗಿದೆ ಅಥವಾ ವಾಹನ ಜಪ್ತಿ ಮಾಡಲಾಗಿದೆ? (ಜಿಲ್ಲಾವಾರು ಸಂಪೂರ್ಣ ಮಾಹಿತಿ ನೀಡುವುದು) | ಕೇಂದ್ರ ಮೋಟಾರು ವಾಹನಗಳ ಕಾಯ್ದೆ 1988ರ ಕಲಂ 39ರಲ್ಲಿ "Necessity for Registration :- No person shall drive any Motor Vehicle and no owner of a motor vehicle shall cause or permit the vehicle to be driven in any public place or in any other place unless the vehicle is registered in accordance with this chapter and the certificate of registration of the vehicle has not been suspended or cancelled and the vehicle carries a registration mark displayed in the prescribed manner" ಎಂದು ವ್ಯಾಖ್ಯಾನಿಸಿದ್ದು, ಸದರಿ ನಿಯಮದ ಪ್ರಕಾರ ನೋಂದಣಿಯಾಗದಂತಹ ಯಾವುದೇ ವಾಹನಗಳು ರಸ್ತೆಯ ಮೇಲೆ ಸಂಚರಿಸಲು ಅವಕಾಶವಿರುವುದಿಲ್ಲ. ಪ್ರಸ್ತುತ ಹೊಸ ಸಾರಿಗೇತರ ವಾಹನಗಳನ್ನು ವಾಹನ ಮಾರಾಟಗಾರರ ಹಂತದಲ್ಲಿಯೇ ನೋಂದಣಿ ಮಾಡಲು ಅವಕಾಶ ಕಲ್ಪಿಸಲಾಗಿದ್ದು, ಡೀಲರ್‌ಗಳೇ ವಾಹನಗಳನ್ನು ನೋಂದಣಿ ಮಾಡಿಸಿ ತದನಂತರವೇ ವಾಹನಗಳನ್ನು ಸಂಬಂಧಪಟ್ಟ ಮಾಲೀಕರಿಗೆ ಹಸ್ತಾಂತರಿಸುವುದು ಕಡ್ಡಾಯವಾಗಿರುತ್ತದೆ. ಆದುದರಿಂದ ನೂತನ ವಾಹನಗಳು ನೋಂದಣಿಯಾಗದೆ ರಸ್ತೆಯ ಮೇಲೆ ಚಲಾಯಿಸಲು ಅವಕಾಶವಿರುವುದಿಲ್ಲ.<br><br>ಕೇಂದ್ರ ಮೋಟಾರು ವಾಹನಗಳ ನಿಯಮಗಳು 1989ರ ನಿಯಮ 53 (ಬಿ) (2) ರಲ್ಲಿ, ವಾಹನದ ಚಾಸಿಸ್ ಆಧಾರದ ಮೇಲೆ ನೋಂದಣಿಯಾಗುವಂತಹ ವಾಹನಗಳಿಗೆ ಕವಚ ನಿರ್ಮಾಣ ಮಾಡಲು 6 ತಿಂಗಳು ಕಾಲಾವಕಾಶ ಹಾಗೂ ದಿವ್ಯಾಂಗಜನ್ ವ್ಯಕ್ತಿಗಳಿಗೆ ಅನುಕೂಲವಾಗುವಂತೆ ವಾಹನಗಳಲ್ಲಿ ಮಾರ್ಪಾಡು ಮಾಡಲು 45 ದಿನಗಳ ಕಾಲಾವಕಾಶ ನೀಡುವುದರೊಂದಿಗೆ ತಾತ್ಕಾಲಿಕ ನೋಂದಣಿ ಮಾಡಬಹುದಾಗಿರುತ್ತದೆ. ಆದರೆ, ಸಂಪೂರ್ಣ ನಿರ್ಮಿತ ವಾಹನಗಳಿಗೆ ತಾತ್ಕಾಲಿಕ ನೋಂದಣಿ ನೀಡಲು ಅವಕಾಶವಿರುವುದಿಲ್ಲ.<br><br>ತಾತ್ಕಾಲಿಕ ನೋಂದಣಿ ಪಡೆದಂತಹ ವಾಹನಗಳು, ಕೇಂದ್ರ ಮೋಟಾರು ವಾಹನಗಳ ನಿಯಮಗಳು 1989ರ ನಿಯಮ 47 ರಡಿ ನಿಗದಿತ ದಾಖಲೆಗಳೊಂದಿಗೆ 7 ದಿನಗಳೊಳಗಾಗಿ ಸಂಬಂಧಿಸಿದ ನೋಂದಣಿ ಪ್ರಾಧಿಕಾರಕ್ಕೆ ನೋಂದಣಿಗಾಗಿ ಅರ್ಜಿ ಸಲ್ಲಿಸಬೇಕಾಗುತ್ತದೆ.<br><br>ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಕಚೇರಿ, ಉಡುಪಿ ವ್ಯಾಪ್ತಿಯಲ್ಲಿ ನಕಲಿ ದಾಖಲೆ ಸೃಷ್ಟಿಸಿ ಒಂದು ವಾಹನ ನೋಂದಣಿ ಮಾಡಿರುವುದು ಕಂಡು ಬಂದಿದ್ದು, ಸದರಿ ವಾಹನವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗಿದ್ದು ಪ್ರಸ್ತುತ ಪ್ರಕರಣವು ಮಾನ್ಯ ಲೋಕಾಯುಕ್ತರಲ್ಲಿ ವಿಚಾರಣೆಗೆ ಬಾಕಿ ಇರುತ್ತದೆ |

ಟಿಡಿ 21 ಟಿಡಿಕ್ಯೂ 2026

(ರಾಮಲಿಂಗಾರೆಡ್ಡಿ)
ಸಾರಿಗೆ ಮತ್ತು ಮುಜರಾಯಿ ಸಚಿವರು

## ಅನುಬಂಧ

## ಒಂದೇ ನೋಂದಣಿ ಸಂಖ್ಯೆ /ಪರವಾನಗಿಯಡಿ ಸಂಚರಿಸುತ್ತಿದ್ದ ವಾಹನಗಳ ವಿರುದ್ಧ ಕೈಗೊಂಡ ಕ್ರಮದ ವಿವರ

| ವಿಭಾಗದ ಹೆಸರು | ಕಛೇರಿಯ ಹೆಸರು | ವಾಹನ ಸಂಖ್ಯೆ | ಕೈಗೊಂಡ ಕ್ರಮ | ಷರಾ |
|---|---|---|---|---|
| ಬೆಂಗಳೂರು (ನಗರ) | ಸ.ಪ್ರಾ.ಸಾ.ಅ. ದೇವನಹಳ್ಳಿ | KA-06/B 6746 (ಬಸ್) | ವಾಹನಗಳನ್ನು ಮುಟ್ಟುಗೋಲು ಹಾಕಿಕೊಳ್ಳಲಾಗಿರುತ್ತದೆ | ತನಿಖಾ ಹಂತದಲ್ಲಿರುತ್ತದೆ |
| ಬೆಂಗಳೂರು (ಗ್ರಾಮಾಂತರ) | 1. ಪ್ರಾಸಾ.ಅ. ಕೋಲಾರ | AR-01/W 9299 (ಬಸ್) | ಪ್ರಕರಣ ದಾಖಲಿಸಿ ದಂಡ ವಸೂಲಿಸಲಾಗಿರುತ್ತದೆ | ರಾಜಿದಂಡ ಪಾವತಿಸಿಕೊಳ್ಳಲಾಗಿದ್ದು, ತೆರಿಗೆ ವಿಷಯದಲ್ಲಿ ಮಾನ್ಯ ಉಚ್ಚ ನ್ಯಾಯಾಲಯದಿಂದ ತಡೆಯಾಜ್ಞೆ ಜಾರಿಯಾಗಿರುತ್ತದೆ. |
| | 2. ಪ್ರಾ.ಸಾ.ಅ. ನೆಲಮಂಗಲ | KA16/A 7159 (ಬಸ್) | ಪ್ರಕರಣ ದಾಖಲಿಸಿ ವಾಹನಗಳನ್ನು ಮುಟ್ಟುಗೋಲು ಹಾಕಿಕೊಳ್ಳಲಾಗಿರುತ್ತದೆ | ತನಿಖಾ ಹಂತದಲ್ಲಿರುತ್ತದೆ |
| | 3. ಸ.ಪ್ರಾ.ಸಾ.ಅ. ಕೆ.ಜಿ.ಎಫ್ | KL05/R 7522 (ಬಸ್) | ವಾಹನಗಳನ್ನು ಮುಟ್ಟುಗೋಲು ಹಾಕಿಕೊಳ್ಳಲಾಗಿರುತ್ತದೆ | ಪ್ರಕರಣ ದಾಖಲಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. |
| | 4. ಪ್ರಾ.ಸಾ.ಅ. ರಾಮನಗರ | KA06/B 5766 (ಬಸ್) | ವಾಹನಗಳನ್ನು ಮುಟ್ಟುಗೋಲು ಹಾಕಿಕೊಳ್ಳಲಾಗಿರುತ್ತದೆ. | ಘನ ನ್ಯಾಯಾಲಯದ ಮಧ್ಯಂತರ ಆದೇಶದ ಮೇರೆಗೆ ವಾಹನವನ್ನು ಬಿಡುಗಡೆಗೊಳಿಸಲಾಗಿರುತ್ತದೆ |
| ಮೈಸೂರು | ಪ್ರಾ.ಸಾ.ಅ. ಮಂಡ್ಯ | KA-22/B 3967 (ಬಸ್) | ಪ್ರಕರಣ ದಾಖಲಿಸಿ ತನಿಖಾ ವರದಿ ನೀಡಲಾಗಿರುತ್ತದೆ | ತನಿಖಾ ಹಂತದಲ್ಲಿರುತ್ತದೆ. |

ಅಪರ ಸಾರಿಗೆ ಆಯುಕ್ತರು (ಪ್ರ) (ದ)
ಬೆಂಗಳೂರು



File No. TD/21/TDQ/2026-DO-Trans (Computer No. 2090328)
Generated from eOffice by [illegible]